## ಷೆಡ್ಯೂಲ್—1

### ಕೆಂಪೇಗೌಡ ಫಿಸಿಯೋಥೆರಪಿ ಸಂಸ್ಥೆ, ಕೆ.ಆರ್.ರಸ್ತೆ, ಬೆಂಗಳೂರು.

ಬಿ.ಪಿ.ಟಿ. ವಿದ್ಯಾರ್ಥಿಗಳು –60, ಪಿ.ಜಿ.(ಎಂ.ಪಿ.ಟಿ.) ವಿದ್ಯಾರ್ಥಿಗಳು–20

ಮಂಜೂರಾದ ಬೋಧಕ ಸಿಬ್ಬಂದಿ: ಪ್ರೊಫೆಸರ್–2, ಅಸೋಸಿಯೇಟ್ ಪ್ರೋಫೆಸರ್–3, ಅಸಿಸ್ಟೆಂಟ್ ಪ್ರೊಫೆಸರ್–5, ಲೆಕ್ಚರರ್– 4.

1. ಬೋಧಕ ಸಿಬ್ಬಂದಿ::

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ | ಮಂಜೂರಾದ ವೃಂದಬಲ | ನೇಮಕಾತಿ ವಿಧಾನ | ವಿದ್ಯಾರ್ಹತೆ |
|---|---|---|---|---|
| (1) | (2) | (3) | (4) | (5) |
| 1 | ಪ್ರಿನ್ಸಿಪಾಲ್ / ಸಂಸ್ಥೆಯ ಮುಖ್ಯಸ್ಥರು | 1 | ಜೇಷ್ಠತೆಯಲ್ಲಿ ಹಿರಿಯ ಪ್ರೊಫೆಸರ್ ನಿಯುಕ್ತಿ | 1) ಅಂಗೀಕೃತ ವಿಶ್ವವಿದ್ಯಾಲಯದಿಂದ ಮಾಸ್ಟರ್ ಆಫ್ ಫಿಸಿಯೋಥೆರಪಿ ಪದವಿ ಹೊಂದಿರಬೇಕು.<br>2) ಪ್ರೊಫೆಸರ್ ವೃಂದದಲ್ಲಿ 1 ವರ್ಷದ ಅನುಭವದೊಂದಿಗೆ ಮಾಸ್ಟರ್ ಆಫ್ ಫಿಸಿಯೋಥೆರಪಿ ಪದವಿ ಪೂರ್ಣಗೊಳಿಸಿದ ನಂತರ ಒಟ್ಟು 10 ವರ್ಷಗಳ ಬೋಧನಾ ಅನುಭವ ಹೊಂದಿರಬೇಕು.<br>3) ಸಂಸ್ಥೆಯಲ್ಲಿ ಸೇವೆಸಲ್ಲಿಸುತ್ತಿರುವ ಜೇಷ್ಠತೆಯಲ್ಲಿ ಹಿರಿಯರಾದ ಪ್ರೊಫೆಸರ್‌ರವರು ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುವುದು. |
| 2 | ಪ್ರೊಫೆಸರ್ | 1 | ಅಸೋಸಿಯೇಟ್ ಪ್ರೊಫೆಸರ್ ವೃಂದದಿಂದ ಬಡ್ತಿ | 1) ಅಂಗೀಕೃತ ವಿಶ್ವವಿದ್ಯಾಲಯದಿಂದ ಫಿಸಿಯೋಥೆರಪಿಯಲ್ಲಿ ಮಾಸ್ಟರ್ಸ್ ಪದವಿ ಹೊಂದಿರಬೇಕು<br>2) ವಿಶ್ವವಿದ್ಯಾಲಯದಲ್ಲಿ/ ಕಾಲೇಜಿನಲ್ಲಿ ಕನಿಷ್ಠ 9 ವರ್ಷಗಳ ಬೋಧನಾ ಮತ್ತು ಸಂಶೋಧನೆ ಅನುಭವವನ್ನು ಹೊಂದಿರತಕ್ಕದ್ದು; ಅದರಲ್ಲಿ 3 ವರ್ಷಗಳು ಸಂಸ್ಥೆಯಲ್ಲಿ ಅಸೋಸಿಯೇಟ್ ಪ್ರೊಫೆಸರ್ ವೃಂದದಲ್ಲಿನ ಸೇವೆ ಆಗಿರತಕ್ಕದ್ದು.<br>3) 4 ಸಂಶೋಧನಾ ಪ್ರಕಟಣೆಗಳು ಕಡ್ಡಾಯವಾಗಿದ್ದು, ಅವುಗಳಲ್ಲಿ ಪ್ರಥಮ/ದ್ವಿತೀಯ ಲೇಖಕರಾಗಿ ಕನಿಷ್ಠ 2 ಪ್ರಕಟಣೆಗಳು ಅಸೋಸಿಯೇಟ್ ಪ್ರೊಫೆಸರ್ ವೃಂದದಲ್ಲಿ ಮತ್ತು 2 ಪ್ರಕಟಣೆಗಳು ಅಸಿಸ್ಟೆಂಟ್ ಪ್ರೊಫೆಸರ್ ವೃಂದದಲ್ಲಿ ಇದ್ದು ಇಂಡೆಕ್ಸ್‌ಡ್ ಜರ್ನಲ್‌ನಲ್ಲಿ ಪ್ರಕಟಗೊಂಡಿರಬೇಕು.<br>4) ಒಂದು ವರ್ಷದ ಅವಧಿಯೊಳಗೆ ಬಡ್ತಿಗೆ ಅರ್ಹ ಅಭ್ಯರ್ಥಿ ಲಭ್ಯವಿಲ್ಲದಿದ್ದಲ್ಲಿ ರಾಜೀವಾ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ನೇರ ನೇಮಕಾತಿ. |

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ | ಮಂಜೂರಾದ ವೃಂದಬಲ | ನೇಮಕಾತಿ ವಿಧಾನ | ವಿದ್ಯಾರ್ಹತೆ |
|---|---|---|---|---|
| (1) | (2) | (3) | (4) | (5) |
| 3 | ಅಸೋಸಿಯೇಟ್ ಪ್ರೋಫೆಸರ್ | 3 | ಅಸಿಸ್ಟೆಂಟ್ ಪ್ರೊಫೆಸರ್ ವೃಂದದಿಂದ ಬಡ್ತಿ | 1) ಅಂಗೀಕೃತ ವಿಶ್ವವಿದ್ಯಾಲಯದಿಂದ ಮಾಸ್ಟರ್ ಆಫ್ ಫಿಸಿಯೋಥೆರಪಿ ಪದವಿ ಹೊಂದಿರಬೇಕು.<br>2) ಕನಿಷ್ಠ 6 ವರ್ಷಗಳ ಒಟ್ಟು ಬೋಧನಾ ಮತ್ತು ಸಂಶೋಧನಾ ಅನುಭವ ಹೊಂದಿದ್ದು ಅದರಲ್ಲಿ ಕನಿಷ್ಠ 3 ವರ್ಷ ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಯಲ್ಲಿ ಸಂಸ್ಥೆಯಲ್ಲಿನ ಸೇವೆ ಆಗಿರಬೇಕು.<br>3) ಪ್ರಥಮ/ದ್ವಿತೀಯ ಲೇಖಕರಾಗಿ ಕನಿಷ್ಠ 2 ಸಂಶೋಧನಾ ಪ್ರಕಟಣೆಗಳನ್ನು ಇಂಡೆಕ್ಸಡ್ ಜರ್ನಲ್‌ನಲ್ಲಿ ಪ್ರಕಟಿಸಿರಬೇಕು.<br>4) ಒಂದು ವರ್ಷದ ಅವಧಿಯೊಳಗೆ ಬಡ್ತಿಗೆ ಅರ್ಹ ಅಭ್ಯರ್ಥಿ ಲಭ್ಯವಿಲ್ಲದಿದ್ದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ನೇರ ನೇಮಕಾತಿ. |
| 4 | ಅಸಿಸ್ಟೆಂಟ್ ಪ್ರೊಫೆಸರ್ | 5 | ಶೇಕಡಾ 40 ನೇರ ನೇಮಕಾತಿ (2 ಹುದ್ದೆಗಳು)<br><br>ಮತ್ತು<br><br>ಶೇಕಡಾ 60 (3 ಹುದ್ದೆಗಳು) ಲೆಕ್ಚರರ್ ವೃಂದದಿಂದ ಬಡ್ತಿ | **<u>ನೇರ ನೇಮಕಾತಿಗೆ:</u>**<br>1) ಅಂಗೀಕೃತ ವಿಶ್ವವಿದ್ಯಾಲಯದಿಂದ ಮಾಸ್ಟರ್ ಆಫ್ ಫಿಸಿಯೋಥೆರಪಿ ಪದವಿ ಹೊಂದಿರಬೇಕು.<br>2) ವಿಶ್ವವಿದ್ಯಾಲಯದಿಂದ ಅಂಗೀಕೃತವಾದ ಸಂಸ್ಥೆಯಲ್ಲಿ ಲೆಕ್ಚರರ್ ಹುದ್ದೆಯಲ್ಲಿ 3 ವರ್ಷಗಳ ಪೂರ್ಣಪ್ರಮಾಣದ ಅನುಭವ.<br>3) ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗೀಕೃತ ವಿಶ್ವವಿದ್ಯಾಲಯದಿಂದ ಮಾಸ್ಟರ್ ಆಫ್ ಫಿಸಿಯೋಥೆರಪಿ ಪದವಿಯೊಂದಿಗೆ 4 ವರ್ಷಗಳ ಅನುಭವ ಮತ್ತು 2 ಸಂಶೋಧನಾ ಪ್ರಕಟಣೆಗಳನ್ನು ಹೊಂದಿರುವವರನ್ನು ನೇಮಕಾತಿಗೆ ಪರಿಗಣಿಸಬಹುದು.<br>**<u>ಬಡ್ತಿಗೆ:</u>**<br>1) ಅಂಗೀಕೃತ ವಿಶ್ವವಿದ್ಯಾಲಯದಿಂದ ಮಾಸ್ಟರ್ ಆಫ್ ಫಿಸಿಯೋಥೆರಪಿ ಪದವಿ ಹೊಂದಿರಬೇಕು.<br>2) ಸಂಸ್ಥೆಯಲ್ಲಿ ಲೆಕ್ಚರರ್ ಆಗಿ ಕನಿಷ್ಠ 3 ವರ್ಷಗಳ ಅನುಭವ ಹೊಂದಿರಬೇಕು. |
| 5 | ಲೆಕ್ಚರರ್ | 4 | ನೇರ ನೇಮಕಾತಿ | ಅಂಗೀಕೃತ ವಿಶ್ವವಿದ್ಯಾಲಯದಿಂದ ಮಾಸ್ಟರ್ ಆಫ್ ಫಿಸಿಯೋಥೆರಪಿ ಪದವಿ ಹೊಂದಿರಬೇಕು. |

2. ಬೋಧಕೇತರ ಸಿಬ್ಬಂದಿ:

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ | ಮಂಜೂರಾದ ವೃಂದಬಲ | ನೇಮಕಾತಿ ವಿಧಾನ | ವಿದ್ಯಾರ್ಹತೆ |
|---|---|---|---|---|
| (1) | (2) | (3) | (4) | (5) |
| 1 | ಕಛೇರಿ ಅಧೀಕ್ಷಕ | 1 | ಪ್ರಥಮ ದರ್ಜೆ ಸಹಾಯಕ/ ತತ್ಸಮಾನ ವೃಂದಗಳಿಂದ ಮುಂಬಡ್ತಿ | ಪ್ರಥಮ ದರ್ಜೆ ಸಹಾಯಕ / ತತ್ಸಮಾನ ವೃಂದದಲ್ಲಿ 5 ವರ್ಷಗಳಿಗೆ ಕಡಿಮೆ ಇಲ್ಲದ ಸೇವೆ ಸಲ್ಲಿಸಿರಬೇಕು. |
| 2 | ಪ್ರಥಮ ದರ್ಜೆ ಸಹಾಯಕ (ಸಿಬ್ಬಂದಿ, ಹಣಕಾಸು ಮತ್ತು ಲೆಕ್ಕಪತ್ರ) | 1 | ರಾಜ್ಯ ಒಕ್ಕಲಿಗರ ಸಂಘ ಕೇಂದ್ರ ಕಛೇರಿ ವೃಂದ ಮತ್ತು ನೇಮಕಾತಿ ನಿಯಮಾವಳಿ 2019ರ ನಿಯಮ 12(iii) ರಲ್ಲಿ ನಿಗದಿಪಡಿಸಿರುವಂತೆ | <u>ನೇರ ನೇಮಕಾತಿಗೆ:</u><br>1) ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು.<br>2) ಅಂಗೀಕೃತ ಸಂಸ್ಥೆಯಿಂದ ಬೇಸಿಕ್ ಕಂಪ್ಯೂಟರ್ ಕೋರ್ಸ್ ಸರ್ಟಿಫಿಕೇಟ್ ಪಡೆದಿರಬೇಕು.<br><u>ಬಡ್ತಿಗೆ:</u> ದ್ವಿತೀಯ ದರ್ಜೆ ಸಹಾಯಕ / ತತ್ಸಮಾನ ವೃಂದದಲ್ಲಿ ಕನಿಷ್ಠ 10 ವರ್ಷ ಸೇವೆ ಸಲ್ಲಿಸಿರಬೇಕು. |
| 3 | ಅಸಿಸ್ಟೆಂಟ್ ಲೈಬ್ರೇರಿಯನ್ | 1 | ನೇರ ನೇಮಕಾತಿ | ಅಂಗೀಕೃತ ವಿಶ್ವವಿದ್ಯಾಲಯದಿಂದ ಬಿ.ಲಿಬ್. ಪದವಿ ಹೊಂದಿರಬೇಕು. |
| 4 | ಗ್ರಂಥಾಲಯ ಸಹಾಯಕ | 1 | ನೇರ ನೇಮಕಾತಿ | 1) ಪದವಿ ಪೂರ್ವ ಶಿಕ್ಷಣ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು..<br>2) ಅಂಗೀಕೃತ ಸಂಸ್ಥೆಯಿಂದ ಬೇಸಿಕ್ ಕಂಪ್ಯೂಟರ್ ಕೋರ್ಸ್ ಸರ್ಟಿಫಿಕೇಟ್ ಪಡೆದಿರಬೇಕು.<br>1) *ಲೈಬ್ರರಿ ಸೈನ್ಸ್‌ನಲ್ಲಿ ಡಿಪ್ಲೊಮ ವಿದ್ಯಾರ್ಹತೆ ಹೊಂದಿರುವವರಿಗೆ ಆದ್ಯತೆ ನೀಡುವುದು.* |
| 5 | ಲೈಬ್ರರಿ ಅಟೆಂಡರ್ | 1 | ನೇರ ನೇಮಕಾತಿ | ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |
| 6 | ಪ್ರಯೋಗಾಲಯ ಅಟೆಂಡರ್ | 2 | ನೇರ ನೇಮಕಾತಿ | ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |

| (1) | (2) | (3) | (4) | (5) |
|---|---|---|---|---|
| 7 | ಅಟೆಂಡರ್<br>(ಕಛೇರಿ –1)<br>(ಪ್ರಾಂಶುಪಾಲರ ಕಛೇರಿ –1) | 2 | ನೇರ ನೇಮಕಾತಿ | ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |
| 8 | ಹೊರರೋಗಿ ಕೌಂಟರ್ ಸಹಾಯಕ<br>(ದ್ವಿ.ದ.ಸ. ಸಮಾನ) | 2 | ನೇರ ನೇಮಕಾತಿ | 1) ಪದವಿ ಪೂರ್ವ ಶಿಕ್ಷಣ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು..<br>2) ಅಂಗೀಕೃತ ಸಂಸ್ಥೆಯಿಂದ ಬೇಸಿಕ್ ಕಂಪ್ಯೂಟರ್ ಕೋರ್ಸ್ ಸರ್ಟಿಫಿಕೇಟ್ ಪಡೆದಿರಬೇಕು. |
| 9 | ಸ್ವೀಪರ್ | 2 | ಹೊರಗುತ್ತಿಗೆ | 50 ವರ್ಷ ಮೀರಿರಬಾರದು. |

**ಟಿಪ್ಪಣಿ:** ಕ್ರಮ ಸಂಖ್ಯೆ: 1, 2, 5, 6, 7 ಮತ್ತು 8 ರಲ್ಲಿನ ಹುದ್ದೆಗಳನ್ನು ಷೆಡ್ಯೂಲ್–2 ರಲ್ಲಿ ನಮೂದಿಸಿರುವ ಒಂದುಗೂಡಿಸಿದ ಸಿಬ್ಬಂದಿಯಿಂದ ಭರ್ತಿಮಾಡತಕ್ಕದ್ದು.

10/12/2015

**(ಕೆ.ಹೆಚ್.ನರಸಿಂಹಮೂರ್ತಿ)**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ರಾಜ್ಯ ಒಕ್ಕಲಿಗರ ಸಂಘ.